



ಸಂತೋಷವಾಯಿತು. ಹರಿಲಾಲನ ಪೂರ್ವಿಕರ ಬಗ್ಗೆ ಹಾಗೂ ಪೋರಬಂದರಿನಲ್ಲಿ ಅವರಿಗಿದ್ದ ವರ್ಚಸ್ಸಿನ ಬಗ್ಗೆ ತಿಳಿದು ಅಕ್ಕಸಾಲಿಗ ಗದ್ಗದಿತನಾದ. ತನ್ನ ಊರು ಪೋರಬಂದರಿನ ವ್ಯಾಪಾರಿಯೊಬ್ಬ ಅದೂ ತನಗೆ ಪರಿಚಿತನಾದ ನೆರೆಮನೆಯ ವ್ಯಕ್ತಿ ಇಂದು ದೇಶದಲ್ಲಿ ಹೆಸರನ್ನು ಮಾಡುತ್ತಿದ್ದಾನೆ ಎಂಬುದನ್ನು ತಿಳಿದು ತನಗೆ ಹೆಮ್ಮೆಯಾಗುತ್ತಿದೆ ಎಂಬ ಮಾತನ್ನು ಅವನು ಹರಿಲಾಲನಿಗೆ ಹೇಳಿದ. ನಂತರ ಅವನು ಹರಿಲಾಲನ ಕ್ಷೇಮಸಮಾಚಾರ ಮತ್ತು ಕೆಲಸಕಾರ್ಯಗಳ ಬಗ್ಗೆ ವಿಚಾರಿಸಿದ.

ಈ ಅಕ್ಕಸಾಲಿಗನನ್ನು ಬಹುಶಃ ದೇವರು ತನ್ನ ಸಹಾಯಕ್ಕಾಗಿಯೇ ಕಳುಹಿಸಿದ್ದಾನೆಂದು ಹರಿಲಾಲನಿಗೆ ಅನ್ನಿಸಿತು. ಅವನು ಮೆಲ್ಲನೆ ತನ್ನ ಕಷ್ಟಗಳ ಬಗ್ಗೆ ಚರ್ಚಿಸಿದ.

'ತುಂಬಾ ಕಷ್ಟದಲ್ಲಿ ಸಿಲುಕಿದ್ದೇನೆ, ಚಿಕ್ಕಪ್ಪ! ನನ್ನ ಪರಿವಾರ ಎಷ್ಟು ಬಡತನದಲ್ಲಿದೆ ಎಂಬುದು ನಿಮಗೆ ಗೊತ್ತೇ ಇದೆ. ನನ್ನ ಬಳಿ ಬಿಡಿಗಾಸೂ ಸಹ ಇಲ್ಲ, ಈ ಹೊಸ ಸ್ಥಳದಲ್ಲಿ ನಾನು ಯಾರೆದುರು ಕೈಚಾಚಲಿ? ಹೆಂಡತಿಯ ಒಡವೆಗಳನ್ನು ಮಾರುವ ಸ್ಥಿತಿಗೆ ಬಂದಿದ್ದೇನೆ..'

'ಹರಿಲಾಲ್, ಇದೇನು ಹೇಳುತ್ತಿದ್ದೀರ?' ಅಕ್ಕಸಾಲಿಗ ಸಹಾನುಭೂತಿಯಿಂದ ಹೇಳಿದ, 'ನಿಮ್ಮ ಈ ಕಷ್ಟದಲ್ಲಿ ನನ್ನ ಅಗತ್ಯವುಂಟಾದರೆ...'

'ಒಂದು ವೇಳೆ ಒಂದು ಎರಡು ಸಾವಿರ ರೂಪಾಯಿಗಳನ್ನು ಕೊಟ್ಟರೆ ನಿಮ್ಮ ಉಪಕಾರವನ್ನು ನಾನು ಮರೆಯುವುದಿಲ್ಲ. ಪ್ರತಿ ತಿಂಗಳು ಸಂಬಳದಂತೆ ನಿಮಗೆ ಮರಳಿ ಕಳುಹಿಸುತ್ತೇನೆ.'

ಅಕ್ಕಸಾಲಿಗ ಹರಿಲಾಲನನ್ನು ನಂಬಿ ತಕ್ಷಣ ಅವನಿಗೆ ಎರಡು ಸಾವಿರ ರೂಪಾಯಿಗಳನ್ನು ಎಣಿಸಿಕೊಟ್ಟ. ಹಣ ಕೊಡುವಾಗ ಈ ಮಾತನ್ನೂ ಹೇಳಿದ, 'ನನಗೆ ನೀವು ಅಪರಿಚಿತರಲ್ಲ. ಬಾಪೂ ಹೆಸರಿನಲ್ಲಿ ನೀವು ಯಾಚಿಸಲು ಹೊರಟರೆ ಲಕ್ಷಾಂತರ ರೂಪಾಯಿಗಳು ನಿಮ್ಮ ಕೈಗೆ ಬಂದು ಬೀಳುತ್ತವೆ. ನೀವು ಬಾಪೂ ಅವರ ಮಗನೆಂಬುದೇ ನನಗೆ ದೊಡ್ಡ ಜಾಮೀನಾಗಿದೆ.'

ಆದರೆ ಈಗ ಎರಡು ಸಾವಿರ ರೂಪಾಯಿಗಳಿಂದ ಸಹ ಹರಿಲಾಲನ ಬಡತನವನ್ನು ನೀಗಿಸಲು ಸಾಧ್ಯವಿರಲಿಲ್ಲ. ಹರಿಲಾಲ ಜವಳಿಯ ಇನ್ನೊಂದು ವ್ಯಾಪಾರಕ್ಕೆ ಕೈ ಹಾಕಿ, ತನ್ನ ಅದೃಷ್ಟವನ್ನು ಪರೀಕ್ಷಿಸಲು ಮುಂದಾದ. ಹರಿಲಾಲ ರಾತ್ರೋರಾತ್ರಿ ಹಣ ಸಂಪಾದನೆ ಮಾಡಲು ಬಯಸುತ್ತಾನೆ ಎಂಬ ಅವನ ದೌರ್ಬಲ್ಯವನ್ನು ತಿಳಿದ ನಂತರ ಅವನಿಗೆ ಆಸೆ ಹುಟ್ಟಿಸಿ, ಅವನ ಗಂಟನ್ನು ಹಗುರಗೊಳಿಸುವವರ ಕೊರತೆ ಕಲ್ಕತ್ತಾದಲ್ಲಿ ಕಡಿಮೆ ಇರಲಿಲ್ಲ. ಹರಿಲಾಲ ಮತ್ತೊಮ್ಮೆ ತನ್ನ ಕೈಯನ್ನು ಸುಟ್ಟುಕೊಂಡ. ಈ ಬಾರಿಯ ನಾಶವನ್ನು ಶರಾಬಿನ ಬಾಟ್ಲಿಯೊಂದಿಗೆ ಮರೆಯಲು ಬಯಸಿದ.

** *

ಪೋರಬಂದರಿನ ಆ ಒಳ್ಳೆಯ ಮನುಷ್ಯನಾದ ಅಕ್ಕಸಾಲಿಗ ಕಲ್ಕತ್ತಾದಿಂದ ಬರುವ ಹಣದ ನಿರೀಕ್ಷೆಯಲ್ಲಿಯೇ ಉಳಿದ. ಅತ್ತ ರಾಜಕೋಟದಲ್ಲಿ ಅವನ ಅತ್ತೆ ಸಹ ಅಳಿಯನ ಬಗ್ಗೆ ಗಾಳಿ ಸುದ್ದಿಗಳನ್ನು ಕೇಳುತ್ತಿದ್ದಳು. ಆ ಸುದ್ದಿಗಳನ್ನು ಕೇಳಿ ಅವಳು ಕಳವಳಗೊಳ್ಳುತ್ತಿದ್ದಳು. ಅವಳಿಗೆ ಈಗ ಬಡ್ಡಿಯ ಹಣ ಬರುವುದು ನಿಂತಿತ್ತು. ಮೂಲ ಹಣ ಮುಳುಗಿದರೆ? ಎಂಬ ಚಿಂತೆ ಅವಳನ್ನು ಕಾಡುತ್ತಿತ್ತು. ಪಾಪ, ಆ ವೃದ್ಧೆ ಕಂಗಾಲಾಗಿದ್ದಳು. ಆ ವೃದ್ಧೆ ಗಾಬರಿಯಿಂದ ತನ್ನ ಬೀಗರಿಗೆ ಪತ್ರವನ್ನು ಬರೆದು ಅಳಿಯನ ಬಗ್ಗೆ ದೂರಿದರು. ವೃದ್ಧೆ ಪತ್ರವನ್ನು ದೀರ್ಘವಾಗಿ ಬರೆದು, ತಾನು ಯಾವ ಪರಿಸ್ಥಿತಿಯಲ್ಲಿ ತನ್ನ ಒಟ್ಟು ಬಂಡವಾಳವನ್ನು ಹರಿಲಾಲನಿಗೆ ಕೊಟ್ಟೆ ಎಂಬುದನ್ನು ತಿಳಿಸಿದ್ದಳು. ಅಲ್ಲದೆ ಅವಳು ತುಂಬಾ ದೈನ್ಯತೆಯಿಂದ ತನ್ನ ಹಣವನ್ನು ಮರಳಿ ಕೊಡಿಸಬೇಕೆಂದು ವಿನಂತಿಸಿಕೊಂಡಿದ್ದಳು.

ಬಾಪೂ ಅವರಿಗೆ ಈ ಸುದ್ದಿ ಒಮ್ಮೆಲೆ ಹೊಸದಾಗಿತ್ತು. ಹರಿಲಾಲ ಇಷ್ಟು ನೀಚನಾಗಿ, ತನ್ನ ಪರಿವಾರದ ಸದಸ್ಯರೊಂದಿಗೆ ಇಷ್ಟು ನೀಚತನದಿಂದ ವರ್ತಿಸುವುದನ್ನು ತಿಳಿದು ಬಾಪೂ ಅವರಿಗೆ ತುಂಬಾ ಆಘಾತವಾಯಿತು. ಅಲ್ಲದೆ ಅದೇ ವೇಳೆಗೆ ಪೋರಬಂದರಿನ ಅಕ್ಕಸಾಲಿಗ ಸಹ ಬಾಪೂ ಅವರಿಗೆ ಪತ್ರವನ್ನು ಬರೆದು ತನ್ನ ಕಥೆಯನ್ನು ಹೇಳಿದ್ದ

'ಬಾಪೂ, ನಾನು ಮರವನ್ನು ನೋಡಿ ಹಣ್ಣನ್ನು ತಿಂದಿದ್ದೆ. ಮಾವಿನ ಮರದಲ್ಲಿ ಕಹಿ ಕರಿಜಾಲಿ ಸಹ ಬೆಳೆಯುವುದೆಂದು ನನಗೆ ತಿಳಿದಿರಲಿಲ್ಲ. ನೀವು ಈಗ ದಯವಿಟ್ಟು ನನ್ನ ಹಣವನ್ನು ಮರಳಿ ಕೊಡಿಸಿ.'

ಬಾಪೂ ಅವರಿಗೆ ದಿಕ್ಕೇ ತೋಚದಂತಾಯಿತು. ಹರಿಲಾಲನ ಬಗ್ಗೆ ಬೇರೊಂದು ಸುದ್ದಿಯನ್ನು ತಿಳಿದು ಬಾಪೂ ಮತ್ತೂ ಆಘಾತಕ್ಕೊಳಗಾದರು. ಹರಿಲಾಲ ಹಣ ಗಳಿಸುವ ಸುಳಿಯಲ್ಲಿ ತನ್ನ ನೈತಿಕತೆಯನ್ನು ಕೈಬಿಟ್ಟಿದ್ದಾನೆ ಎಂದು ತಿಳಿದು ಬಾಪೂ ಅವರ ಮನಸ್ಸು ಖಿನ್ನಗೊಂಡಿತು. ಅವರು ಹರಿಲಾಲನಿಗೆ ಎರಡು ವಾಕ್ಯಗಳ ಪತ್ರವೊಂದನ್ನು ಬರೆದರು

'ಹರಿ, ನೈತಿಕತೆಯ ಬಂಡವಾಳವೇ ನಿಜವಾದ ಲಕ್ಷ್ಮೀಯಾಗಿದ್ದಾಳೆ. ಅದನ್ನು ಕಾಪಾಡಿಕೋ. ಈ ಸತ್ಯ ನಿನಗೆ ಅರ್ಥವಾಗಲಿ ಎಂದು ನಾನು ಬಯಸುತ್ತೇನೆ.'

***

ಈಗ ದಿನೇದಿನೇ ಮನೆಯ ಖರ್ಚನ್ನು ಸರಿದೂಗಿಸಲು ಸಹ ಹರಿಲಾಲನಿಗೆ ಕಷ್ಟವಾಗುತ್ತಿತ್ತು. ಸೇಠ್ ನರೋತ್ತಮದಾಸರ ದೃಷ್ಟಿಯಲ್ಲೂ ಹರಿಲಾಲ ಬಿದ್ದು ಹೋಗಿದ್ದ. ಹೀಗಾಗಿ ಈ ದಿಶೆಯಲ್ಲಿ ಯಾವುದೇ ವಿಧದ ಸಹಾಯದ ಭರವಸೆ ಇರಲಿಲ್ಲ. ಅವನು ಗುಲಾಬಳ ದೃಷ್ಟಿಯಲ್ಲಿ ಸಹ ಅಪರಾಧಿಯಾಗಿದ್ದ. ಅವಳನ್ನು ನೋಡಲೂ ಸಹ ಹೆದರುತ್ತಿದ್ದ. ತಾನು ಗುಲಾಬಳನ್ನು ಸುಖವಾಗಿಡಲಿಲ್ಲ, ಅಲ್ಲದೆ ತಾನು ಗುಲಾಬಳನ್ನು ಮತ್ತಷ್ಟು ಅಸಹಾಯಕಳನ್ನಾಗಿ ಮಾಡಿದೆ, ಅವಳನ್ನು ನಾಚಿಕೆಗೇಡಿನ ಸ್ಥಿತಿಗೆ ತಳ್ಳಿದೆ ಎಂದು ಸದಾ ಯೋಚಿಸುತ್ತಿದ್ದ. ಇಂಥ ಪರಿಸ್ಥಿತಿಯಲ್ಲಿ ಗುಲಾಬಳ ಕಣ್ಣುಗಳಲ್ಲಿದ್ದ ಮೌನ ಸಂಕೇತ ಅಥವಾ ಕರುಣೆಯ ಸ್ಪರ್ಶ ಸಹ ಅವನನ್ನು ಸುಡುತ್ತಿದ್ದವು.

ಆದರೆ ದಿನೇ ದಿನೇ ಹೆಚ್ಚುತ್ತಿದ್ದ ಮದ್ಯದ ಪ್ರಮಾಣ ಹರಿಲಾಲ ಅಂಗಾಂಗಗಳಲ್ಲಿ ಬೆಂಕಿಯನ್ನು ಹೊತ್ತಿಸುತ್ತಿತ್ತು. ಆ ಬೆಂಕಿಯನ್ನು ನಂದಿಸಲು ಹರಿಲಾಲ ಅದೊಂದು ದಿನ ಇನ್ನೊಂದು ಹೆಜ್ಜೆ ಕೆಳಗಿಳಿದ. ಈಗ ಅವನು ಪತನದ ಏಣಿಯಿಂದ ತೀವ್ರವಾಗಿ ಕೆಳಗೆ ಜಾರುತ್ತಾ ಹೋದ.

ಸೋನಾಗಾಛಿಯ ಬಜಾರಿಗೆ ಮತ್ತೊಬ್ಬ ಗಿರಾಕಿ ಹೆಚ್ಚಿದ. ಗುಲಾಬ ಪತಿಯಲ್ಲಾದ ಈ ಪರಿವರ್ತನೆಯನ್ನು ಕಂಡು ಬೆರಗಾದಳು. ಅವಳು ಒಂದೂ ಶಬ್ದವನ್ನು ಹೇಳಲಿಲ್ಲ. ತನ್ನ ಪತಿ ದೇವರೆದುರು ಅವಳು ಕೈಮುಗಿದು ರೋದಿಸುತ್ತಿದ್ದಳು. ಬಿಕ್ಕಳಿಸಿ ಬಿಕ್ಕಳಿಸಿ ರೋದಿಸುತ್ತಿದ್ದ ತನ್ನ ಹೆಂಡತಿಯ ಕಣ್ಣುಗಳಲ್ಲಿ ಸುರಿಯುತ್ತಿದ್ದ ಕಣ್ಣೀರನ್ನು ಕಂಡು ಹರಿಲಾಲನ ಮುಖ ಬಿಳುಪಾಯಿತು. ಅವನು ತಲೆಯೆತ್ತಿ ತನ್ನ ಹೆಂಡತಿಯನ್ನು ನೋಡದಾದ. ಅವನು ತನ್ನ ತುಟಿಗಳನ್ನು ಕಚ್ಚಿಕೊಂಡ; ಅವನ ಮನಸ್ಸಿನಲ್ಲಿ ನಡೆಯುತ್ತಿದ್ದ ಹೊಯ್ದಾಟ, ತುಟಿಗಳಲ್ಲಿ ರಕ್ತದ ಹನಿಗಳ ರೂಪವನ್ನು ಧರಿಸಿ ಒಸರುತ್ತಿತ್ತು.

ಏನೂ ತಿಳಿಯದ ಮುಗ್ಧ ಮಕ್ಕಳು, ಮನೆಯ ಖರ್ಚುಗಳಿಗೆ ಬಿಗಡಾಯಿಸುತ್ತಿದ್ದ ಪರಿಸ್ಥಿತಿ, ರಾಜಕೋಟದಿಂದ ತಾಯಿಯು ತನ್ನ ಹಣವನ್ನು ಕಳುಹಿಸುವಂತೆ ಬರೆಯುವ ಪತ್ರಗಳು, ಹರಿಲಾಲನ ಬಗ್ಗೆ ತಾಯಿಯ ದೂಷಣೆ, ದಿನೇ ದಿನೇ ಬದಲಾಗುತ್ತಿದ್ದ ಹರಿಲಾಲನ ಸ್ವಭಾವ, ಅವನ ದುರವಸ್ಥೆ... ಎಲ್ಲವನ್ನೂ ನಿತ್ಯ ಅನುಭವಿಸುತ್ತಿದ್ದ ಗುಲಾಬಳಿಗೆ ಪತಿಯಲ್ಲಾದ ಈ ಬದಲಾವಣೆಯಿಂದ ದಿಕ್ಕೇ ತೋಚದಂತಾಯಿತು. ಅವಳಿಂದ ಇದೆಲ್ಲವನ್ನೂ ಸಹಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಮನಸ್ಸು ಭಾರವನ್ನು ಹೊತ್ತಿತ್ತು. ಆದರೆ ದೇಹದಿಂದ ಭಾರವನ್ನು ಹೊರಲಾಗಲಿಲ್ಲ. ಗುಲಾಬಳ ಆರೋಗ್ಯ ಹದಗೆಟ್ಟಿತು. ಹೇಗೋ ಮುಂದಕ್ಕೆ ಹೋಗುತ್ತಿದ್ದ ಮನೆಯೆಂಬ ವಾಹನ ಈಗ ಗಡಗಡ ಸದ್ದು ಮಾಡುವಷ್ಟು ಹಾಳಾಯಿತು.

ಹರಿಲಾಲನಿಗೆ ಹೆಂಡತಿಯ ದುಃಖ ಅರ್ಥವಾಗುತ್ತಿತ್ತು. ತನ್ನ ಅಸಫಲತೆಗಳು ಹಾಗೂ ವ್ಯವಹಾರಗಳ ಸುಳಿವು ಅವಳಿಗೆ ತಿಳಿದಿತ್ತು. ತನ್ನ ಅಪರಾಧಗಳಿಂದಾಗಿಯೇ ಗುಲಾಬ ಕಾಯಿಲೆ ಬಿದ್ದಳು ಎಂಬ ಅಪರಾಧ ಪ್ರಜ್ಞೆಯಿಂದ ಹರಿಲಾಲ ಹೆಂಡತಿಯ ಆರೈಕೆಯನ್ನು ಮಾಡಲು ಆರಂಭಿಸಿದ. ಈ ಆರೈಕೆಯಿಂದಾಗಿ ಹೊರಗಿನ ಕೆಲಸಕಾರ್ಯಗಳಿಗೆ ಅಡಚಣೆಯಾಯಿತು. ಅವನ ನೌಕರಿಯ ಹಾಜರಾತಿ ಕಡಿಮೆಯಾಯಿತು. ಔಷಧಿಗಳು ದುಬಾರಿಯಾಗುತ್ತಿದ್ದವು, ಹರಿಲಾಲ ಔಷಧಿಗಳಿಗೆ ಹಣ ಹೊಂದಿಸದಾದ. ಗುಲಾಬಳಿಗೆ ಪತಿಯ ಈ ಓಡಾಟ, ವ್ಯಾಕುಲತೆ ಎಲ್ಲವೂ ಅರ್ಥವಾಗುತ್ತಿತ್ತು, ಆದರೆ ಅವಳು ಅಸಹಾಯಕಳಾಗಿದ್ದಳು.

ಕಡೆಗೆ ಅದೊಂದು ದಿನ ಹರಲಾಲ ದಣಿದು ಗುಲಾಬಳಿಗೆ ಹೇಳಿದ, 'ಗುಲಾಬ! ನನ್ನಿಂದ ನಿನ್ನನ್ನು ಸುಖವಾಗಿಡಲು ಸಾಧ್ಯವಾಗಲಿಲ್ಲ, ನಮ್ಮ ಪರಿಸ್ಥಿತಿ ತುಂಬಾ ಬಿಗಡಾಯಿಸುತ್ತಿದೆ. ನಿನ್ನ ಆರೋಗ್ಯ ಸಹ ಮೊದಲಿಗಿಂತ ಹಾಳಾಗುತ್ತಿದೆ. ಒಂದು ವೇಳೆ ನೀನು ಮಕ್ಕಳೊಂದಿಗೆ ಕೆಲವು ದಿನ ತವರಿಗೆ